

ಕಾಡಿನ ನಡುವೆ ಕೋಲ್ಮಿಂಚು!

ನಿದ್ರಾಲೋಕದಲ್ಲಿ ಕಣ್ಣುಬಿಟ್ಟು ಕಿಟಕಿಯಾಚೆ ನೋಡಿದೆ, ಇನ್ನೂ ಕತ್ತಲಾವರಿಸಿತ್ತು. ಬೆಳಗಿನ ಜಾವ ನಿಧಾನವಾಗಿ ಕಣ್ಣುತೆರೆಯುತ್ತಿತ್ತು. ಆಗಿನ್ನೂ ಪಕ್ಷಿಗಳ ಕಲರವ ದೂರದೆಲ್ಲಿಂದಲೋ ಸಣ್ಣಗೆ ಕೇಳಿಸುತ್ತಿತ್ತು. ದೂರದ ಮರದ ಮೇಲೆ ನವಿಲು ಹಾಡಿದರೆ ಮಲಗಿದ್ದ ರೂಮಿನ ಪಕ್ಕದ ಮರದಲ್ಲಿ ಮೈನಾಹಕ್ಕಿಗಳ ಜೋರಾದ ಕಲರವ. ಕುಟ್ರಹಕ್ಕಿಯ (**White Cheeked Barbet**) ಕುಟ್ರ... ಕುಟ್ರ... ಕುಟ್ರುರ್sss ಧ್ವನಿ ಆಗಿನ್ನೂ ಪ್ರಾರಂಭವಾಗಿತ್ತು.

ಕನಸಿನ ಲೋಕದಿಂದ ಹೊರಬಂದು ಕಣ್ತೆರೆದು ನೋಡಿದೆ. ಕಿಟಕಿಯಿಂದ ಹಾದುಬಂದ ಮಂಜು ಮುಸುಕಿದ ಬೆಳಕು ಕಣ್ತುಂಬಿ ಮೈಮನಗಳನ್ನು ಪುಳಕ ಆವರಿಸಿತು. ಓಹ್! ಕಾಡಿಗೆ ಹೊರಡುವ ಸಫಾರಿ ಜೀಪುಗಳು ಹೊರಡಲು ಅಣಿಯಾಗುತ್ತಿದ್ದ ಶಬ್ದ... ಸಮಯ ಆಗಲೇ ಬೆಳಗಿನ ಜಾವ 5.30. ತಲೆಯಮೇಲೆ ಎರಡು ಮಗ್ ನೀರು ಬಿದ್ದರೆ ನಿದ್ರೆಯ ಆಲಸ್ಯ ದೂರಾಗುತ್ತದೆಯಲ್ಲದೆ, ಕಾಡಿನ ಪಯಣದ ಮಧ್ಯೆ ಬೆಳಗಿನ ನಿತ್ಯಕರ್ಮಗಳು ಬಾಧಿಸದಿರಲೆಂದು ಸ್ನಾನಗೃಹದ ಕ್ರಿಯೆಗಳು ಕಡ್ಡಾಯವಾಗಿ ಮುಗಿಸಿಕೊಂಡಿರಬೇಕಾದ ಶಿಸ್ತು ಮನದೊಳಗೆ ಮೂಡಿ, ಪ್ರಾತಃಕ್ರಿಯೆಗಳನ್ನೆಲ್ಲ ಮುಗಿಸಿ ಕಾನನದ ಹಾದಿಯಲ್ಲಿ ಕಾಣತೊಡಗಿದ ಗ್ರಾಮ ಬದುಕಿದ ಪುಟಗಳು ತೆರೆದುಕೊಳ್ಳತೊಡಗಿದವು.

ಮಂಜು ಮುಸುಕಿದ ಹಾದಿಯಲ್ಲಿ ನಮ್ಮ ಜೀಪು ಕಾಡನ್ನು ಸೀಳಿಕೊಂಡು ನಿಧಾನವಾಗಿ ಮುಂದುವರೆದಿತ್ತು. ಕಾಡಿಗೆ ಕಾಡೇ